**ದಿನಾಂಕ: 20.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ : ಅರ್ಜಿದಾರ ಪರ ಶ್ರೀ.ಟಿ ಬಿ ಎಸ್ ವಕೀಲರಿಂದ

ನಾನು ಈ ಅರ್ಜಿಯಲ್ಲಿ ಅರ್ಜಿದಾರರಾಗಿದ್ದು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ನನಗೆ ತಿಳಿದಿವೆ ಮತ್ತು ಸತ್ಯವಾಗಿವೆ ಹಾಗೂ ಅದರಲ್ಲಿರುವ ಸಹಿ ನನ್ನದೇ ಇರುತ್ತದೆ. ನನ್ನ ಪರವಾಗಿ ಹಾಜರುಪಡಿಸಿದ ದಾಖಲೆಗಳನ್ನು ನಿಶಾನಿಸಬೇಕೆಂದು ಕೇಳಿಕೊಳ್ಳುತ್ತೇನೆ.

| | |
|---|---|
| ನಿ ಪಿ 11 | ಗಾಯದ ಪ್ರಮಾಣಪತ್ರ |
| ನಿ ಪಿ 12 | ಒಂದು ಡಿಸ್ಚಾರ್ಜ ಸಮರಿ |
| ನಿ ಪಿ 13 | 7 ಸಲಹಾ ಚೀಟಿಗಳು, 20 ಮೆಡಿಕಲ್ ಬಿಲ್ಲುಗಳನ್ನು ಒಟ್ಟಾಗಿ |
| ನಿ ಪಿ 14 | ನನ್ನ ಆಧಾರಕಾರ್ಡನ ನೋಟರಿ ಪ್ರತಿಯನ್ನು ಮೂಲ ಪ್ರತಿ ನೋಡಿ ಗುರುತಿಸಿ ಮೂಲ ಪ್ರತಿಯನ್ನು ಅರ್ಜಿದಾರರಿಗೆ ಸೂಕ್ತ ಹಿಂಬರಹದೊಂದಿಗೆ ಮರಳಿಸಲಾಯಿತು. |

ನನ್ನ ಅರ್ಜಿಯಲ್ಲಿ ಕೋರಿದಂತೆ ಅರ್ಜಿಯನ್ನು ಪುರಸ್ಕರಿಸಲು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ಎದುರುದಾರ ಪರ ಶ್ರೀ. ಎಸ್ ಟಿ ಕೆ ವಕೀಲರಿಂದಃ

ನಾನು ಎಂ ಕಾಂ ದ್ವಿತಿಯ ವರ್ಷದಲ್ಲಿ ಓದುತ್ತಿದ್ದೇನೆ. ಘಟನೆ ದಿನ ರಾತ್ರಿ 11.00 ಗಂಟೆಗೆ ನಮ್ಮ ಕಾಲೇಜು ಆಯೋಜಿಸಿದ್ದ ಒಂದು ಖಾಸಗಿ ಬಸ್ ನಲ್ಲಿ ನಾವು ಮೂವರು ಹಾಗೂ ಇತರೆ 42 ಜನ, ಒಟ್ಟಾಗಿ 45 ಜನ ಪ್ರವಾಸಕ್ಕೆ ಹೋಗುತ್ತಿದ್ದೆವು. ಶಿವಮೊಗ್ಗದಿಂದ ಹೊರಟು ಶಿರಸಿಯಲ್ಲಿ ಸ್ಟಾಪ ಮಾಡಿ ಅಲ್ಲಿ ಅರ್ಧ ಗಂಟೆ ಕಾಲ ಕಳೆದು ಮತ್ತೆ ಬೆಳಿಗ್ಗೆ 2.45 ಗಂಟೆಗೆ ಹೊರಟೆವು. ಶಿರಸಿಯಿಂದ ಘಟನಾ ಸ್ಥಳ ಬಸ್ ನಲ್ಲಿ ಹೋದಲ್ಲಿ ಸುಮಾರು 45 ನಿಮಿಷದ ದಾರಿ ಇರಬಹುದು. ಅಪಘಾತ ಸ್ಥಳದ ರಸ್ತೆ ಕಾಡಿನ ರಸ್ತೆ ಆಗಿದ್ದು ಹಾಗೂ ತಿರುವು ಮುರವಿನ ಒಂದು ವಾಹನ ಓಡಾಡುವಷ್ಟು ಅಗಲವಾದ ರಸ್ತೆ ಇದೆ ಎಂದರೆ ನಿಜ. ಬಸ್ ಚಾಲಕನು ತುಂಬಾ ವೇಗದಲ್ಲಿ ಹೋಗುತ್ತಿದ್ದ ಆದರೆ ನಿಖರವಾಗಿ ಎಷ್ಟು ವೇಗದಲ್ಲಿ ಹೋಗುತ್ತಿದ್ದ ಎಂದು ಹೇಳಲಾಗುವುದಿಲ್ಲ.

ಅಪಘಾತ ಸಮಯ ಬೆಳಿಗ್ಗೆ 2.45 ಆಗಿದ್ದರಿಂದ ಸಾಮಾನ್ಯವಾಗಿ ಅದು ದೀರ್ಘ ನಿದ್ರೆಗೆ ಹೋಗುವ ಸಮಯ ಎಂದರೆ ನಿಜ. ಅದು ಮಧ್ಯ ರಾತ್ರಿಯಾಗಿದ್ದು, ಒಂದು ವಾಹನ ಓಡಾಡುವಷ್ಟು ಅಗಲವಾದ ರಸ್ತೆ ಆಗಿದ್ದು ಹಾಗೂ ತಿರುವು ಮುರವಿನ ರಸ್ತೆಯಾಗಿದ್ದರಿಂದ ಚಾಲಕ ನಿಧಾನವಾಗಿ ಹೋಗುತ್ತಿದ್ದ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ಇಬ್ಬನಿ ಬಿದ್ದಿತ್ತು ಎಂದರೆ ನಿಜ. ಇಬ್ಬನಿ ಇದ್ದದ್ದರಿಂದಲೂ ಬಸ್ ಚಾಲಕ ನಿಧಾನವಾಗಿ ಹೋಗುತ್ತಿದ್ದ ಎಂದರೆ ಸರಿಯಲ್ಲ. ಅವನು ನಿಧಾನವಾಗಿ ಹೋಗುತ್ತಿದ್ದರೂ ಕೂಡಾ ವೇಗವಾಗಿ ಹೋಗುತ್ತಿದ್ದ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಬ್ಬನಿ ಇದ್ದದ್ದರಿಂದ ರಸ್ತೆ ತೇವವಾಗಿತ್ತು ಎಂದರೆ ಸಾಕ್ಷಿ ಅಷ್ಟೊಂದು ಇಬ್ಬನಿ ಇರಲಿಲ್ಲ ಎನ್ನುತ್ತಾರೆ. ಆದ ಕಾರಣಕ್ಕೂ ಕೂಡಾ ಆತನು ನಿಧಾನಕ್ಕೆ ಹೋಗುತ್ತಿದ್ದು ಆದರೆ ಟೈಯರ್ ಗಳು ಜಾರುತ್ತಿದ್ದವು ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಬಸ್ ಚಾಲಕನ ಯಾವುದೇ ತಪ್ಪು ಇರಲಿಲ್ಲ ಎಂದರೆ ಸರಿಯಲ್ಲ.

ಸದರಿ ಅಪಘಾತದಲ್ಲಿ ನನ್ನ ಬಲಮುಂಗೈನ ಮಧ್ಯದ ಬೆರಳಿಗೆ ಮೂಳೆ ಮುರಿತದ ಗಾಯವಾಗಿದ್ದು ಶಸ್ತ್ರ ಚಿಕಿತ್ಸೆ ಮಾಡಿ ಒಂದು ಕೇ-ವೈಯರ್ ಅಳವಡಿಸಿದ್ದಾರೆ ಹಾಗೂ ಬಲಕಿವಿಯ ಹತ್ತಿರ ಗಾಯವಾಗಿತ್ತು. ಅಲ್ಲಿ ಹೊರತುಪಡಿಸಿ ನನಗೆ ಬೇರೆ ಯಾವುದೇ ಗಾಯಗಳಾಗಿಲ್ಲ. ಅಪಘಾತ ಆದ ತಕ್ಷಣ ಯಲ್ಲಾಪೂರ ಸರಕಾರಿ ಆಸ್ಪತ್ರೆಯಲ್ಲಿ ನಂತರ ಶಿವಮೊಗ್ಗದ ಮೆಟ್ರೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಅಪಘಾತದ ದಿನದಂದೇ ಯಲ್ಲಾಪೂರ ಸರಕಾರಿ ಆಸ್ಪತ್ರೆಯಲ್ಲಿ ದಾಖಲಾಗಿ ಅದೇ ದಿನ ಶಿವಮೊಗ್ಗದ ಮೆಟ್ರೋ ಆಸ್ಪತ್ರೆಯಲ್ಲಿ 3 ದಿನಗಳವರೆಗೆ ಒಳರೋಗಿ ಅಂತಾ ಚಿಕಿತ್ಸೆ ಪಡೆದಿರುತ್ತೇನೆ. ಇಲ್ಲಿಯವರೆಗೆ ನಾನು ಒಟ್ಟಾರೆಯಾಗಿ ಚಿಕಿತ್ಸೆಗೆ ಅಂತಾ 4 ಲಕ್ಷ ರೂಪಾಯಿ ಖರ್ಚು ಮಾಡಿದ್ದೇನೆ ಅಂತಾ ಹಾಗೂ ಮುಂದುವರೆದ ಚಿಕಿತ್ಸೆಗೆ 1 ಲಕ್ಷ ರೂಪಾಯಿ ಬೇಕಾಗುತ್ತದೆ ಅಂತಾ ತೋರಿಸಲು ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಅಪಘಾತದಲ್ಲಿ ನನಗೆ ಕೇವಲ ಸಾದಾ ಸ್ವರೂಪದ ಗಾಯಗಳು ಆಗಿದ್ದು ಹೇಗಾದರೂ ಮಾಡಿ ಹೆಚ್ಚಿನ ಪರಿಹಾರವನ್ನು ಗಿಟ್ಟಿಸುವ ಉದ್ದೇಶದಿಂದ ನಾನು ಸುಳ್ಳು ದಾಖಲಾತಿಗಳನ್ನು ಹಾಜರುಮಾಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಗಾಯದಿಂದ ನನ್ನ ಯಾವುದೇ ಶೈಕ್ಷಣಿಕ ವರ್ಷ ನಷ್ಟ ಆಗಿಲ್ಲ. ನಾನು ಕ್ಯಾಟರಿಂಗ್ ನಿಂದ ಒಂದು ದಿನಕ್ಕೆ 1000 ರೂಪಾಯಿ ಗಳಿಸುತ್ತಿದ್ದೆ ಅಂತಾ ದಾಖಲೆ ಕೊಟ್ಟಿಲ್ಲ. ಆದ್ದರಿಂದ ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಸಂಪೂರ್ಣವಾಗಿ ಗುಣ ಹೊಂದಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ಕೆಲಸ ಕಾರ್ಯಗಳನ್ನು ಮುಂಚಿನಂತೆ

ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಯಾವುದೇ ರೀತಿಯ ಅಂಗನ್ಯೂನ್ಯತೆಯಿಂದ ಬಳಲುತ್ತಿಲ್ಲ ಎಂದರೆ ಸರಿಯಲ್ಲ. ಅಪಘಾತದ ಗಾಯದಿಂದ ನಾನು ಮದುವೆ ಆಗುವ ಯೋಗದಿಂದ ವಂಚಿತನಾಗಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಬಸ್ ಚಾಲಕನ ಯಾವುದೇ ತಪ್ಪು ಇಲ್ಲದ್ದರಿಂದ ನಾನು ಕೇಳಿದ ಪರಿಹಾರಕ್ಕೆ 2 ನೇ ಎದುರುದಾರ ಸಂಸ್ಥೆ ಬಾಧ್ಯಸ್ಥ ಅಲ್ಲ ಎಂದರೆ ಸರಿಯಲ್ಲ.

1 ನೇ ಎದುರುದಾರರು ಹಾಗೂ ಅವರ ಪರ ವಕೀಲರು ಗೈರು ಹಾಜರು ಇದ್ದದ್ದರಿಂದ ಅವರ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

<u>: ಮರುವಿಚಾರಣೆ : ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

(ಶ್ರೀ. ಮಹೇಶ ಎಸ್. ಪಾಟೀಲ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್

( ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ಎದುರುದಾರರು ಹಾಗೂ ಅವರ ವಕೀಲರನ್ನು ಕರೆಯಲಾಯಿತು, ಗೈರು ಹಾಜರಿ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

2 ನೇ ಎದುರುದಾರರು ಏಕಪಕ್ಷೀಯವಾಗಿರುವ ಕಾರಣ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

(ಅರ್ಜಿದಾರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಗಿದೆ)

**(**ಎದುರುದಾರರು ಮತ್ತು ಅವರ ವಕೀಲರನ್ನು ಕರೆಯಲಾಯಿತು. ಗೈರು ಹಾಜರು, ತಕರಾರು ಸಲ್ಲಿಸಿರುವುದಿಲ್ಲ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**)**